**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಸ್ಪೆಷಲ್ ಸಿ. ನಂ.181/2017**

ದಿನಾಂಕ 31.10.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 8 ಪ್ರಾಸಾ - 14

| | | |
|---|---|---|
| ಹೆಸರು | ಃ | ವೀರನರಸಯ್ಯ |
| ತಂದೆಯ ಹೆಸರು | ಃ | ರಾಮಕೃಷ್ಣಯ್ಯ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಕಂಬಿ ಕೆಲಸ |
| ವಾಸಸ್ಥಳ | ಃ | ಮಾಗಡಿ ಟೌನ್ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ಹೇಮಂತ್ ಕುಮಾರ್ ನನ್ನ ಚಿಕ್ಕಪ್ಪನ ಮಗ. ಈಗ ಸುಮಾರು 8 ವರ್ಷಗಳ ಹಿಂದೆ ಆತ ಕೊಲೆಯಾಗಿರುತ್ತಾನೆ. ಆತನ ಮೃತ ದೇಹವನ್ನು ಗುರುತಿಸುವ ಸಲುವಾಗಿ ಪೊಲೀಸರು ರಾಜರಾಜೇಶ್ವರಿ ಆಸ್ಪತ್ರೆ ಬೆಂಗಳೂರಿಗೆ ಕರೆಸಿದ್ದು, ನಾನು ಆಸ್ಪತ್ರೆಯಲ್ಲಿ ಆತನ ಮೃತ ದೇಹವನ್ನು ಗುರುತಿಸಿರುತ್ತೇನೆ.

**2.** ಈ ಪ್ರಕರಣದ 2ನೇ ಆರೋಪಿಯಾದ ರಾಜೇಶ್ವರಿಯನ್ನು ಮೃತ ಹೇಮಂತ್ ಕುಮಾರ್ ತನ್ನ ಮನೆಗೆ ಕರೆದುಕೊಂಡು ಬಂದು ಸುಮಾರು ಒಂದು ವರ್ಷಗಳ ಕಾಲ ತನ್ನ ಜೊತೆಯಲ್ಲಿ ಇರಿಸಿಕೊಂಡಿದ್ದ. ಆಕೆಯನ್ನು ಆತ ಮದುವೆಯಾಗಿರಲಿಲ್ಲ. 1ನೇ ಆರೋಪಿ ಸಿದ್ದರಾಜುವಿಗೆ ರಾಜೇಶ್ವರಿ ಜೊತೆ ಸಂಬಂಧವಿತ್ತಂತೆ. ಆಕೆ ಮತ್ತೆ ಸಿದ್ದರಾಜು ಜೊತೆ ಹೋಗಿದ್ದ ಕಾರಣ ಹೇಮಂತ್ ಕುಮಾರ್ ಆಕೆಯನ್ನು ತನ್ನ ಮನೆಗೆ ಬರುವಂತೆ ಕರೆದಿದ್ದ ಕಾರಣ ತಮಗೆ

ತೊಂದರೆಯಾಗುತ್ತದೆ ಎಂದು ಹೇಮಂತ್ ಕುಮಾರ್ ನ್ನು ಕರೆದುಕೊಂಡು ಹೋಗಿ ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು.

**ಪಾಟೀ ಸವಾಲುಃ ಶ್ರೀ.HRK., ವಕೀಲರಿಂದ 1ನೇ ಆರೋಪಿ ಪರವಾಗಿಃ**

**3.** ನಾನು ಒಂದನೇ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿರುತ್ತೇನೆ. ಪಿರ್ಯಾದುದಾರ ನನ್ನ ಸಂಬಂಧಿಕ. ಪೊಲೀಸರು ನನ್ನನ್ನು ಯಾವುದೇ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಶವತನಿಖೆ ಮಾಡಿದ ದಿನಾಂಕ ನನಗೆ ನೆನಪಿಲ್ಲ. ನಾನು ಯಾವುದೇ ಶವವನ್ನು ಗುರುತಿಸಿರುವುದಿಲ್ಲ ಘಟನೆಗೆ ಸಂಬಂಧಿಸಿದಂದತೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಮೃತ ಹೇಮಂತ್ ಮತ್ತು ಪಿರ್ಯಾದುದಾರರ ನನ್ನ ಸಂಬಂಧಿಕರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀಮತಿ.ಕೆ.ಎಸ್., ವಕೀಲರಿಂದ 3ನೇ ಆರೋಪಿ ಪರವಾಗಿಃ**

**4.** ಮೃತ ಹೇಮಂತ್ ಕುಮಾರ್ 2ನೇ ಆರೋಪಿಯುನ್ನು ಪ್ರೀತಿಸಿ ಮದುವೆಯಾಗಿರುವ ವಿಚಾರ ನಿಮಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಮೃತ ಹೇಮಂತ್ ಕುಮಾರ್ 2ನೇ ಆರೋಪಿಯಾಗಿದ್ದು ಅವರಿಗೆ ಲಾವಣ್ಯ ಎಂಬ ಹೆಣ್ಣು ಮಗು ಇದೆ ಎಂದರೆ ಸರಿ. ಮೃತ ಹೇಮಂತ್ ಕುಮಾರ್ 2ನೇ ಆರೋಪಿಯನ್ನು ಮದುವೆಯಾಗಿರುವುದಕ್ಕೆ ಒಂದು ಹೆಣ್ಣು ಮಗು ಆಗಿದೆ ಎಂದರೆ ಸರಿಯಲ್ಲ. ಮೃತ ಹೇಮಂತ್ ಕುಮಾರ್ ಮತ್ತು 2ನೇ ಆರೋಪಿಯ ನಡುವೆ ಯಾವಾಗಲೂ ಜಗಳವಾಗುತ್ತಿದ್ದ ಕಾರಣ 2ನೇ ಆರೋಪಿ ಮನೆ ಬಿಟ್ಟು ಹೋಗಿದ್ದರು ಎಂದರೆ ಮೃತ ಹೇಮಂತ್ ಕುಮಾರ್ ಗೆ ಕುಡಿಯುವ ಚಟ ಇದ್ದು, ಆದರೆ 2ನೇ ಆರೋಪಿಗೆ ಹಿಂಸೆ ಕೊಡುತ್ತಿದ್ದ ಎಂದರೆ ಸರಿಯಲ್ಲ. ಮೃತನಿಗೆ ಕುಡಿಯುವ ಚಟ ಇರುವುದರಿಂದ ಅಕ್ಕಪಕ್ಕದವರೊಂದಿಗೆ ಜಗಳ ಮಾಡಿಕೊಳ್ಳುತ್ತಿದ್ದ, ಆ

ಕಾರಣದಿಂದ ಮೃತ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಶವ ಪಂಚನಾಮೆಯ ಮಾಡಿದ ಸ್ಥಳದ ಚಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಆರೋಪಿಗಳ ಮೇಲೆ ನನಗೆ ದ್ವೇಷ ಇರುವುದರಿಂದ ಈಗ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಶ್ರೀ.ಟಿ.ಜಿ., ವಕೀಲರಿಂದ 2ನೇ ಆರೋಪಿ ಪರವಾಗಿಃ ಮೇಲಿನ ವಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅನುಮತಿಸಲಾಗಿದೆ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.